# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 413 |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರದವರು) |
| ಉತ್ತರಿಸುವ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿ |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ತುಮಕೂರು ಜಿಲ್ಲೆಯಲ್ಲಿ ಸರ್ಕಾರದಿಂದ ಎಷ್ಟು ರೈತರಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>ತುಮಕೂರು ಜಿಲ್ಲೆಯಲ್ಲಿ ಸರ್ಕಾರದಿಂದ ರೈತರಿಗೆ ಭೂಮಿಯನ್ನು ಮಂಜೂರು ಮಾಡಲಾಫಿರುವ ಮಾಹಿತಿ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25.11.2024 ರಂತೆ ದಿನಾಂಕ:15.08.2026ರ ಪ್ರಗತಿ ಮಾಹಿತಿಯಂತೆ ತಂತ್ರಾಂಶದಲ್ಲಿ ದಾಖಲಾಗಿರುವ ತಾಲ್ಲೂಕುವಾರು ವಿವರವು ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಭೂಮಿಯನ್ನು ಮಂಜೂರಾತಿ ಪಡೆದಿರುವ ರೈತರ ಸಂಖ್ಯೆ</th></tr>
<tr><td>1.</td><td>ತುಮಕೂರು</td><td>3350</td></tr>
<tr><td>2.</td><td>ಗುಬ್ಬಿ</td><td>9962</td></tr>
<tr><td>3.</td><td>ಕುಣಿಗಲ್</td><td>4575</td></tr>
<tr><td>4</td><td>ತಿಪಟೂರು</td><td>5975</td></tr>
<tr><td>5</td><td>ತುರುವೇಕೆರೆ</td><td>4675</td></tr>
<tr><td>6</td><td>ಚಿಕ್ಕನಾಯಕನಹಳ್ಳಿ</td><td>4962</td></tr>
<tr><td>7</td><td>ಮಧುಗಿರಿ</td><td>3758</td></tr>
<tr><td>8</td><td>ಕೊರಟಗೆರೆ</td><td>1414</td></tr>
<tr><td>9</td><td>ಶಿರಾ</td><td>8423</td></tr>
<tr><td>10</td><td>ಪಾವಗಡ</td><td>2490</td></tr>
<tr><td></td><td>ಒಟ್ಟು</td><td>49584</td></tr>
</table></td></tr>
<tr><td>ಆ)</td><td>ಎಷ್ಟು ಜನ ರೈತರಿಗೆ ಭೂಮಿಯನ್ನು ಪೋಡಿ ದುರಸ್ತಿ ಮಾಡಿಕೊಳ್ಳಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) ಉಳಿದ ರೈತರ ಭೂಮಿಯನ್ನು ಯಾವ ಕಾಲಮಿತಿಯಲ್ಲಿ ದುರಸ್ತಿ ಮಾಡಿಕೊಡಲಾಗುವುದು;</td><td>ಸರ್ಕಾರದಿಂದ ಮಂಜೂರಾದ ಜಮೀನುಗಳ ಪೋಡಿ ದುರಸ್ತಿ ಕುರಿತು ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳ ಭರ್ತಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024 ರಲ್ಲಿ ಸರಳೀಕರಿಸಿ ದರಖಾಸ್ತು ಪೋಡಿ ಅಭಿಯಾನ ಕೈಗೊಳ್ಳಲು ಆದೇಶ ಮಾಡಲಾಗಿದೆ. ಅದರಂತೆ ತುಮಕೂರು ಜಿಲ್ಲೆಯಲ್ಲಿ ಪೋಡಿ ದುರಸ್ತಿ ಪಡಿಸಲಾದ ಪ್ರಗತಿ ವಿವರ :
<table>
<tr><th>ಕ್ರ.ಸಂ</th><th>ತಾಲ್ಲೂಕು</th><th>ಪೋಡಿ ದುರಸ್ತಿ ಪ್ರಗತಿ</th></tr>
<tr><td>1</td><td>ತುರುವೇಕೆರೆ</td><td>475</td></tr>
<tr><td>2</td><td>ತುಮಕೂರು</td><td>43</td></tr>
<tr><td>3</td><td>ತಿಪಟೂರು</td><td>594</td></tr>
<tr><td>4</td><td>ಶಿರಾ</td><td>1426</td></tr>
<tr><td>5</td><td>ಪಾವಗಡ</td><td>222</td></tr>
<tr><td>6</td><td>ಮಧುಗಿರಿ</td><td>143</td></tr>
<tr><td>7</td><td>ಕುಣಿಗಲ್</td><td>222</td></tr>
</table></td></tr>
</table>

| | | |
|---|---|---|
| 8 | ಕೊರಟಗೆರೆ | 38 |
| 9 | ಗುಬ್ಬಿ | 355 |
| 10 | ಚಿ.ನಾ.ಹಳ್ಳಿ | 212 |
| | ಒಟ್ಟು | 3,730 |

- ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024 ರನ್ವಯ ನಮೂನೆ 01 ರಿಂದ 05 ಗಳಿಗೆ ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಬೇಕಾಗಿರುವ ಕ್ರಮವನ್ನು ರದ್ದುಪಡಿಸಿ, ಇದನ್ನು ದೃಢೀಕರಿಸುವ ಜವಾಬ್ದಾರಿಯನ್ನು ತಹಶೀಲ್ದಾರ್ ರವರಿಗೆ ಸೀಮಿತಗೊಳಿಸಿದೆ.
- ತಹಶೀಲ್ದಾರ್/ಕಂದಾಯ ಅಧಿಕಾರಿಗಳು ನಿಗಧಿ ಪಡಿಸಿರುವ ಕನಿಷ್ಠ ಮಂಜೂರಿ ದಾಖಲೆಗಳನ್ನು ಪರಿಶೀಲಿಸಿ, ಮಂಜೂರಿಯ ನೈಜತೆಯನ್ನು ಖಾತರಿ ಪಡಿಸಿಕೊಂಡು, ಸರ್ಕಾರಿ ಸ.ನಂ ನ ಎಲ್ಲಾ ಮಂಜೂರಿದಾರರಿಗೆ ಏಕ ಕಾಲದಲ್ಲಿ ನಮೂನೆ 01 ರಿಂದ 05 ಗಳನ್ನು ಆನ್‌ಲೈನ್ ನಲ್ಲಿ ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿಯೊಂದಿಗೆ ಅಳತೆಗಾಗಿ ಅನುಬಂಧ-1 ರಂತೆ ಅಧಿಕೃತ ಜ್ಞಾಪನವನ್ನು ಆನ್‌ಲೈನ್ ಮುಖಾಂತರ ತಂತ್ರಾಂಶದಲ್ಲಿ ಅಳತೆಗಾಗಿ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗೆ ಸಲ್ಲಿಸಲಾಗುತ್ತದೆ.
- ಅದರಂತೆ ಭೂಮಾಪನ ಅಧಿಕಾರಿಗಳು ಪರಿಶೀಲಿಸಿ ಅರ್ಹ ಪ್ರಕರಣಗಳಲ್ಲಿ ಅಳತೆ ಕಾರ್ಯ ಕೈಗೊಂಡು ನಿಯಮಾನುಸಾರ ಪೋಡಿ ದುರಸ್ತಿ ಕೆಲಸ ನಿರ್ವಹಿಸಲಾಗುತ್ತಿದೆ.
- ಮಂಜೂರಿ ಪ್ರಕರಣಗಳ ಪೋಡಿ ಅಳತೆಗಾಗಿ ಪ್ರತ್ಯೇಕವಾಗಿ ಭೂಮಾಪಕರನ್ನು ಆಯ್ಕೆ ಮಾಡಿಕೊಳ್ಳಲು ಸಂಬಂಧಿಸಿದ ಭೂದಾಖಲೆಗಳ ಉಪ ನಿರ್ದೇಶಕರಿಗೆ ತಂತ್ರಾಂಶದಲ್ಲಿ ಅವಕಾಶ ಒದಗಿಸಲಾಗಿದೆ.
- ಸದರಿ ಆಂದೋಲನದಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವ ಸಲುವಾಗಿ ಸರ್ಕಾರಿ ಭೂಮಾಪಕರೊಂದಿಗೆ ಹೆಚ್ಚುವರಿಯಾಗಿ ಪರವಾನಗಿ ಭೂಮಾಪಕರು ಕಾರ್ಯ ನಿರ್ವಹಿಸಲು, ಸರ್ಕಾರದ ಆದೇಶ ಸಂಖ್ಯೆ: ಕಂಇ 130 ಎಸ್.ಎಸ್.ಸಿ 2021, ದಿನಾಂಕ: 11-02-2022 ಮತ್ತು ಕಂಇ 130 ಎಸ್ ಎಸ್ ಸಿ 2021, ದಿನಾಂಕ:20-02-2025ರನ್ವಯ ಅವಕಾಶ ಕಲ್ಪಿಸಲಾಗಿರುತ್ತದೆ.

ಪ್ರಸ್ತುತ ರಾಜ್ಯದಲ್ಲಿ ದರಖಾಸ್ತು ಪೋಡಿ ಅಭಿಯಾನವನ್ನು ಯಶಸ್ವಿಯಾಗಿ ಅನುಷ್ಠಾನಗೊಳುತ್ತಿದ್ದು, ಇದೇ ರೀತಿಯಾಗಿ ಈ ಯೋಜನೆಯಡಿ ಎಲ್ಲಾ ಮಂಜೂರಿದಾರರಿಗೆ ಹಂತ ಹಂತವಾಗಿ ಪೋಡಿ ದುರಸ್ತಿ ಪಡೆಸಲು ಕ್ರಮ ಕೈಗೊಳ್ಳಲಾಗುವುದು.



ile No. RD/.../LGT/2026-SO LG3-REVENUE DEPATMENT SEC (Computer No. 2265296)

<table>
<tr>
<td>ಇ)</td>
<td>ತಾಲ್ಲೂಕು ಕಾರ್ಯಾಲಯದಲ್ಲಿ ಪೋಡಿ ದುರಸ್ತಿಗೆ ಅಗತ್ಯವಿರುವ ದಾಖಲೆಗಳು ಲಭ್ಯವಿಲ್ಲದ ಕಾರಣ ಪೋಡಿ ಮಾಡದೆ ರೈತರಿಗೆ/ಭೂ ಮಂಜೂರಿದಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ದಾಖಲೆಗಳು ಲಭ್ಯವಿಲ್ಲದೆ ಇರುವ ಸಂದರ್ಭಗಳಲ್ಲಿ ಪೋಡಿ ದುರಸ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು;</td>
<td>
<ul>
<li>ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024 ರಂತೆ ಪೋಡಿ ದುರಸ್ತಿಗೆ ಅಗತ್ಯವಿರುವ ದಾಖಲೆಗಳನ್ನು ತಂತ್ರಾಂಶದಲ್ಲಿ ನಮೂನೆ 01 ರಿಂದ 05 ನ್ನು ಭರ್ತಿ ಮಾಡಿ ತಹಶೀಲ್ದಾರ್ ರವರು ಪೋಡಿ ದುರಸ್ತಿ ಕಾರ್ಯ ನಿರ್ವಹಿಸಲು ಭೂಮಾಪನ ಶಾಖೆಗೆ ಅನುಬಂಧ-01 ನ್ನು ತಂತ್ರಾಂಶದಲ್ಲಿ ನೀಡಬೇಕಾಗಿರುವ ಕುರಿತು ನಿರ್ದೇಶನಗಳಿರುತ್ತವೆ.</li>
<li>ಮುಂದುವರೆದು ಅಗತ್ಯವಿರುವ ದಾಖಲೆಗಳು ಲಭ್ಯವಿಲ್ಲದ ಪ್ರಕರಣಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 08 ಎಲ್.ಜಿ.ಪಿ 2016 ದಿನಾಂಕ; 20-06-2016 ರನ್ವಯ ಗೈರು ವಿಲೆ ಪ್ರಸ್ತಾವನೆಗಳನ್ನು ತಯಾರಿಸಿ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವ ಗೈರು ವಿಲೆ ಕಡತ ಪುನರ್ ನಿರ್ಮಾಣ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಲ್ಲಿಸಿದ ನಂತರ ನಿಯಾಮಾನುಸಾರ ಪೋಡಿ ದುರಸ್ತಿ ಕಾರ್ಯ ಕೈಗೊಳ್ಳಬೇಕಾಗುತ್ತದೆ. ಅದರಂತೆ ತುಮಕೂರು ಜಿಲ್ಲೆಯಲ್ಲಿಯೂ ಸಹ ಕ್ರಮವಹಿಸಲಾಗುತ್ತಿದೆ.</li>
</ul>
</td>
</tr>
<tr>
<td>ಈ)</td>
<td>ಪೋಡಿ ದುರಸ್ತಿಗೆ ಅಗತ್ಯವಿರುವ ಎಲ್ಲಾ ದಾಖಲೆಗಳು ರೈತರ ಬಳಿ ಇಲ್ಲದ ಕಾರಣ ರೈತರಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದ ಕಾರಣ ಕಂದಾಯ ಇಲಾಖೆಯಿಂದ ಅಭಿಲೇಖಾಲಯದಿಂದ ದಾಖಲೆಗಳನ್ನು ಪಡೆದು ಪೋಡಿ ದುರಸ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;</td>
<td>ಪೋಡಿ ದುರಸ್ತಿ ಕ್ರಮ ಕೈಗೊಳ್ಳಲು ಕನಿಷ್ಠ ಮಂಜೂರಿ ದಾಖಲೆಗಳು ಲಭ್ಯವಿಲ್ಲದ ಪ್ರಕರಣಗಳನ್ನು ನಿಯಮಾನುಸಾರ ಗೈರು ವಿಲೆ ಪುನರ್ ನಿರ್ಮಾಣ ಸಮಿತಿ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಪಡೆದು ನಂತರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ತಂತ್ರಾಂಶದಲ್ಲಿ ದಾಖಲಾಗಿರುವ ಪ್ರಗತಿ ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ.ಸಂ</th><th>ತಾಲ್ಲೂಕು</th><th>Number of Grantees - Sent to Missing Committee</th></tr>
<tr><td>1</td><td>ತುಮಕೂರು</td><td>2418</td></tr>
<tr><td>2</td><td>ಗುಬ್ಬಿ</td><td>2815</td></tr>
<tr><td>3</td><td>ಕುಣಿಗಲ್</td><td>1349</td></tr>
<tr><td>4</td><td>ತಿಪಟೂರು</td><td>1425</td></tr>
<tr><td>5</td><td>ತುರುವೇಕೆರೆ</td><td>2406</td></tr>
<tr><td>6</td><td>ಚಿಕ್ಕನಾಯಕನಹಳ್ಳಿ</td><td>1417</td></tr>
<tr><td>7</td><td>ಮಧುಗಿರಿ</td><td>2247</td></tr>
<tr><td>8</td><td>ಕೊರಟಗೆರೆ</td><td>373</td></tr>
<tr><td>9</td><td>ಶಿರಾ</td><td>1827</td></tr>
<tr><td>10</td><td>ಪಾವಗಡ</td><td>1208</td></tr>
<tr><td></td><td>ಒಟ್ಟು</td><td>17,485</td></tr>
</table>
</td>
</tr>
<tr>
<td>ಉ)</td>
<td>ಕಳೆದ ಜನವರಿ -2026 ರಿಂದ ಇಲ್ಲಿಯವರೆಗೆ ರಾಜ್ಯಾದ್ಯಂತ ಮಾಡಿದ ಪೋಡಿ ದುರಸ್ತಿಯ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ</td>
<td>ರಾಜ್ಯಾದ್ಯಂತ ಮಾಹೆ ಜನವರಿ 2026 ರಿಂದ ಈವರೆಗೆ ದರಖಾಸ್ತು ಪೋಡಿ ಅಭಿಯಾನದಡಿ ಒಟ್ಟು 20,628 ಮಂಜೂರಿದಾರರಿಗೆ ಪೋಡಿ ದುರಸ್ತಿ ಮಾಡಿಕೊಡಲಾಗಿದೆ.<br>ದರಖಾಸ್ತು ಪೋಡಿ ಅಭಿಯಾನದಡಿ ಸಾಧಿಸಿರುವ ತಾಲ್ಲೂಕುವಾರು ಪ್ರಗತಿ ವಿವರವನ್ನು ಅನುಭಂಧ-01 ರಲ್ಲಿ</td>
</tr>
</table>

| | | |
|---|---|---|
| | ನೀಡುವುದು) | ಲಗತ್ತಿಸಿದೆ |
| ಉ) | ಭೂಮಾಪಕರ ಸಂಖ್ಯೆ ಕಡಿಮೆಯಿರುವ ಕಾರಣ ಮತ್ತು ಹೊರಗುತ್ತಿಗೆ ಭೂ ಮಾಪಕರು ಮುಷ್ಕರ ಮಾಡುತ್ತಿರುವ ಕಾರಣ ಸರ್ವೆ ಕಾರ್ಯ ಮಂದಗತಿಯಲ್ಲಿ ಸಾಗುತ್ತಿದ್ದು ಭೂ ಮಾಪಕರ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು? | ಬಾಕಿಯಿರುವ ಪೋಡಿ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ 750 ಜನ ಸರ್ಕಾರಿ ಭೂಮಾಪಕರ ನೇಮಕಾತಿ ಕುರಿತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು ವತಿಯಿಂದ ಅಧಿಸೂಚನೆ ಸಂಖ್ಯೆ:ಇಡಿ/ಕೆಇಎ/19ನೇ.ವಿ/2026(ಕೆ.ಕೆ),ದಿನಾಂಕ:11-07-2026 ರಲ್ಲಿ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ190 ಭೂಮಾಪಕರ ಹುದ್ದೆಗಳಿಗೆ ಮತ್ತು ಅಧಿಸೂಚನೆ ಸಂಖ್ಯೆ:ಇಡಿ/ಕೆಇಎ/18/ನೇ.ವಿ/2026(ಆರ್.ಪಿ.ಸಿ.) ದಿನಾಂಕ:1-07-2026 ರಲ್ಲಿ ಉಳಿಕೆ ಮೂಲ ವೃಂದದಲ್ಲಿ 560 ಭೂಮಾಪಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ<br><br>ಅದರಂತೆ ಪ್ರವೇಶ ಪರಿಕ್ಷೆ ನಡೆಸಿ ಅರ್ಹ ಅಭ್ಯರ್ಥಿಗಳನು ಆಯ್ಕೆ ಮಾಡಿಕೊಂಡು ಇಲಾಖಾ ತರಬೇತಿ ನೀಡಿ, ಅಂತಿಮ ಪರಿಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನು ಸರ್ಕಾರಿ ಭೂಮಾಪಕರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲಾಗುವುದು. |

ಸಂಖ್ಯೆ: ಆರ್‌ಡಿ 135 ಎಲ್‌ಜಿಟಿ 2026

(ಡಾ.ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ



File No. RD/135/LGT/2026 SO LGB REVENUE DEPATMENT SEC (Computer No. 2265296)

ಅನುಬಂಧ

| ಜನವರಿ 2026 ರಿಂದ ಆಗಸ್ಟ್ 2026 ರ ವರೆಗೆ ದರಖಾಸ್ತು ಪೋಡಿ ಅಭಿಯಾನದಲ್ಲಿ ದುರಸ್ತಿಯಾಗಿರುವ ತಾಲ್ಲೂಕುವಾರು ಪಟ್ಟಿ. | | |
|---|---|---|
| **SL.NO** | **Taluk** | **Durasti done counts from 01.01.2026 to 12.08.2026** |
| 1 | 3 | 4 |
| 1 | Turuvekere | 475 |
| 2 | TUMAKURU | 43 |
| 3 | Tiptur | 594 |
| 4 | Sira | 1426 |
| 5 | Pavagada | 222 |
| 6 | Madhugiri | 143 |
| 7 | Kunigal | 222 |
| 8 | Koratagere | 38 |
| 9 | Gubbi | 355 |
| 10 | Chiknayakanahalli | 212 |
| | Total | 3730 |